ಡಾ|| ಯು. ಚಿತ್ತರಂಜನ್ : ಅಮಾಯಕರ ಮೇಲೆ ಕೇಸುಗಳು ಏನು ದಾಖಲಾಗಿದೆ...

ಅಧ್ಯಕ್ಷರು : ನೀವು ಕೇಳುವುದು, ಕೇಸುಗಳನ್ನು ಹಿಂದಕ್ಕೆ ತೆಗೆದುಕೊಳ್ಳಿ ಎಂದು ಅಲ್ಲವೆ? ಅದನ್ನು ನಾನೇ ಕೇಳಿಬಿಡುತ್ತೇನೆ. ಈ ಕೇಸುಗಳು ಇನ್ಯೇಷ್ನಲ್ಲಿ ಹಾಕಿದ್ದ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಅವರ ಅಹವಾಲು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೆ, ನಾನು ಅವರ ಪ್ರಶ್ನೆಯನ್ನು ಗ್ರಾಸ್ ಮಾಡಿದ್ದೇನೆ. ನ್ಯಾಯಮೂರ್ತಿ ಜಗನ್ನಾಥ ಶೆಟ್ಟಿ ಅವರ ಆಯೋಗದ ಮುಂದೆ ಈ ವಿಷಯ ಇರುವುದರಿಂದ ಆಯೋಗದ ತೀರ್ಪಿನ ಬಗ್ಗೆ ಕಾದು ನೋಡತಕ್ಕಂಥದ್ದು ಸರ್ಕಾರದ ಸರಿಯಾದ ಕ್ರಮ ಎನ್ನುವುದು ನನ್ನ ಅಭಿಪ್ರಾಯ.

ಅಧ್ಯಕ್ಷರು : ಆಗಬಹುದು.

ಡಾ|| ಯು. ಚಿತ್ತರಂಜನ್ : ಕೋಮ ಸೌಹಾರ್ದ ಈಗ ಇದೆ ಎಂದು ಬಹುಶಃ ಸರ್ಕಾರ ಒಪ್ಪುತ್ತದೆ. 532 ಜನ ಸತತವಾಗಿ ಕೋರ್ಟುಗಳಿಗೆ ತಿರುಗಾಡುವಂತಹ ಸಂದರ್ಭದಲ್ಲಿ ಈಗ ನೀವು ಏನು ಕ್ರಮಗಳು ಇಲ್ಲಿ, ಹೇಳಿದ್ದೀರಿ ಇದರಿಂದ ಕೋಮು ಸೌಹಾರ್ದ ನೆಲೆಸಲಿಕ್ಕೆ ಖಂಡಿತ ಸಾಧ್ಯವಿಲ್ಲ. ಆದಷ್ಟು ಬೇಗ ಇದರ ಮೇಲೆ ಕ್ರಮ ಕೈಗೊಳ್ಳಬೇಕೆಂದು ನನ್ನದು ಒಂದು ಒತ್ತಾಯ ಇದೆ. ಎರಡನೆಯದಾಗಿ, ವ್ಯವಸ್ಥೆಗಳಿಗೆ ನೀವೇನು ಎರಡನೆಯ ಪ್ರಶ್ನೆಗೆ ಉತ್ತರ ಕೊಟ್ಟಿದ್ದೀರಿ ಇದರಲ್ಲಿ ಕೇವಲ ಶಾಂತಿ ಸಭೆಗಳು, ಕಟ್ಟುನಿಟ್ಟಿನ ಕ್ರಮಗಳು, ಇಂತಹ ಶಬ್ದದ ಆಧಾರದ ಮೇಲೆ ಪರಿಹಾರ ಖಂಡಿತ ಸಿಗುವುದಿಲ್ಲ. ಈ ಪೋಲೀಸ್ ಸೌಲಭ್ಯ ಕೊಡುವುದಾದರೆ ಅಲ್ಲಿ ಖಾಯಂ ಆಗಿ ನೀವು ಪೋಲೀಸ್ ಸ್ಟೇಷನ್ನು ಅಪ್ಗ್ರೇಡ್ ಮಾಡಿದ್ದೀರಿ, ಹೆಚ್ಚುವರಿ ಪೋಲೀಸ್ ಅಧಿಕಾರಿಗಳನ್ನು ಕೊಟ್ಟಿದ್ದೀರಿ ತುಂಬಾ ಸಂತೋಷದ ವಿಷಯ. ಆದರೆ ಈ ಪೋಲೀಸ್ ಅಧಿಕಾರಿಗಳು ಇರಲಿಕ್ಕೆ ವಸತಿ ಸೌಲಭ್ಯ ಇಲ್ಲ.

ಅಧ್ಯಕ್ಷರು : ಅದು ಬೇರೆ ಪ್ರಶ್ನೆಗೆ ಬರುತ್ತೆ ಬಿಡಿ. ತಾವು ಹಾಗೆ ಪ್ರಶ್ನೆಯ ವ್ಯಾಪ್ತಿಯನ್ನು ಬಿಟ್ಟು ಹೊರಟರೆ ಇಡೀ ದಿವಸ ಬೇಕಾಗುತ್ತದೆ.

ರಾಜ್ಯದಲ್ಲಿ ರಸ್ತೆ ದರೋಡೆಗಳು

22 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜನವರಿ 1, 95ರಿಂದ ಮಾರ್ಚ್ 95ರವರೆಗೆ ರಾಜ್ಯದಲ್ಲಿ ನಡೆದಿರುವ ರಸ್ತೆ ದರೋಡೆ, ಲೂಟಿ, ರೌಡಿಗಳ ದಾಂಧಲೆಗಳೆಷ್ಟು? (ಯಾವಾಗ ಮತ್ತುಎಲ್ಲೆಲ್ಲಿ ಎಂಬ ವಿವರ ಒದಗಿಸುವುದು)

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :

ಅ) ರಸ್ತೆ ದರೋಡೆ ರಸ್ತೆ	ಲೂಟಿ ರೌಡಿಗಳ	ಧಾಂದಲೆ
13	44	7

(ಅನುಬಂಧ -1, 2 ಮತ್ತು 3ರಲ್ಲಿ ವಿವರ ಒದಗಿಸಲಾಗಿದೆ)

ಅನುಬಂಧ -1 ಚುಕ್ಕೆ ಗುರುತಿನ ಪ್ರಶ್ನೆ ಸಂ.22.

ಜನವರಿ 1, 1995ರಿಂದ ಮಾರ್ಚ್ 1995ರವರೆಗೆ ನಡೆದಿರುವ ರಸ್ತೆ ದರೋಡೆ ವಿವರಗಳು

ಕ್ರಮ ಸಂಖ್ಯೆ	ಸ್ಥಳ	ದಿನಾಂಕ
1.	ಯುಕೋ ಬ್ಯಾಂಕ್, ಮಡಿವಾಳ ಚೆಕ್ ಪೋಸ್ಟ್ ಬೆಂಗಳೂರು.	27-2-1995
2.	ಅಲಸೂರು ಬಸ್ ನಿಲ್ದಾಣ, ಓ.ಎಂ.ರಸ್ತೆ, ಬೆಂಗಳೂರು	16-2-1995
3.	ವಿಜಯನಗರ-ದೇವನಹಳ್ಳಿ ರಸ್ತೆ ಮಧ್ಯೆ, ಬೆಂಗಳೂರುಜಿಲ್ಲೆ	18-2-1995
4.	ತೋರಣ-ಹೊಳಮುದ್ರ ಗ್ರಾಮ, ಬೀದರ ಜಿಲ್ಲೆ	9-1-1995
5.	ಹೈದರಾಬಾದ್-ಬಾಂಬೆ ರಾಷ್ಟ್ರೀಯ ಹೆದ್ದಾರಿ, ನಿರಣಿ ಗ್ರಾಮ, ಬೀದರ್ ಜಿಲ್ಲೆ	26-2-1995
6.	ಅರಳಿಕಟ್ಟೆ ಗ್ರಾಮ, ಚಿತ್ರದುರ್ಗ	9-1-1995
7.	ಹುಣಸೇಕಟ್ಟೆ, ಚಿತ್ರದುರ್ಗ	9-1-1995
8.	ಚಿತ್ರ ಗ್ರಾಮ, ಪಿ.ಬಿ. ರಸ್ತೆ, ಧಾರವಾಡ	21-2-1995
9.	ಧಾರವಾಡ-ಗೋವಾ ರಸ್ತೆ, ಧಾರವಾಡ	14-2-1995
10.	ಹಿರೇಕೆರೂರು, ದುರ್ಗಮ್ಮ ದೇವಸ್ಥಾನ ಧಾರವಾಡ ಜಿಲ್ಲೆ	31-1-1995
11.	ಪಿ.ಜಿ. ರಸ್ತೆ, ಧಾರವಾಡ	10-1-1995
12.	ಕೋಡಿಶೆಟ್ಟಪುರ ಹತ್ತಿರ, ಮಂಡ್ಯ	14-2-1995
13.	ಕುವೆಂಪುನಗರ, ಪೆಟ್ರೋಲ್ ಬಂಕ್ ಹತ್ತಿರ ಮೈಸೂರು ನಗರ	16-2-1995.

ಅನುಬಂಧ-2

ಜನವರಿ 1, 1995ರಿಂದ ಮಾರ್ಚ್ 1995ರವರೆಗೆ ನಡೆದಿರುವ ರಸ್ತೆ ಲೂಟಿ ವಿವರಗಳು

ಕ್ರಮ ಸಂಖ್ಯೆ	ಸ್ಥಳ	ದಿನಾಂಕ
1.	ಹೊಸಪುರ ರಸ್ತೆ, ಚಿಕ್ಕಮಗಳೂರು	19-1-1995
2.	ಗಾಂಧಿನಗರದ ಹತ್ತಿರ, ಶಿವಮೊಗ್ಗ	1-3-1995
3.	ದುರ್ಗಿಗುಡಿ, ಶಿವಮೊಗ್ಗ	4-3-1995
4.	ಹಾರೋಗಪ್ಪ ಗ್ರಾಮ	3-1-1995
5.	ಜಿಲ್ಲಾ ಬಂಧೀಖಾನೆ, ಶಿವಮೊಗ್ಗ	22-2-1995
6.	ರಾಷ್ಟ್ರೀಯ ಹೆದ್ದಾರಿ-4, ಕೈಗಾರಿಕಾ ಎಸ್ಟೇಟ್ ಕ್ರಾಸ್, ಚಿತ್ರದುರ್ಗ	15-1-1995
7.	ರಿಯೋವಾರ, ಬೀದಿ, ದಾವಣಗೆರೆ	2-2-1995

8.	ಹಾವೇರಿ ನಗರ	10-2-1995
9.	ನಿಲೇರಿ ರೈಲ್ವೆಗೇಟ್	30-1-1995
10.	ಮಾಕಳಿ - ಉಸ್ಕೂರು ರಸ್ತೆ	3-2-1995
11.	ಭಟ್ಕಳ ಪೋಲೀಸ್ ಠಾಣೆ ವ್ಯಾಪ್ತಿ	5-2-1995
12.	ಮಗಿಮಾವಿನಹಳ್ಳಿ ಗ್ರಾಮ 5:	6-1-1995
13.	ನಾರಾಯಣಪಟ್ಟಣ, ಕುಶಾಲನಗರ	-
14.	ದಂಡಿನಮಾರಮ್ಮ ದೇವಸ್ಥಾನ ಮೈಸೂರು	21-1-1995
15.	ಲಕ್ಷ್ಮೀಪುರಂ, 3ನೇ ಮುಖ್ಯ ರಸ್ತೆ, ಮೈಸೂರು	30-1-1995
16.	ಎನ್.ಐ.ಇ. ಮಹಿಳಾ ನಿಲಯ, ವಿದ್ಯಾರಣ್ಣೆ ಪುರ, ಮೈಸೂರು	10-2-1995
17.	ಲಲಿತಾದ್ರಿಪುರ ರಸ್ತೆ, ಮೈಸೂರು	19-2-1995
18.	ಸರಸ್ವತಿ ಚಿತ್ರಮಂದಿರ ಬಳಿ, ಮೈಸೂರು	20-2-1995
19.	ವೀಣೆಶೇಷಣ್ಣ ರಸ್ತೆ, ಮೈಸೂರು	10-2-1995
20.	ಪಂಪಾವತಿ ರಸ್ತೆ, ಮೈಸೂರು	13-1-1995
21.	ಸದಾಶಿವನಗರ ಪೋಲೀಸ್ ಠಾಣೆ ವ್ಯಾಪ್ತಿ	13-1-1995
22.	ಸದಾಶಿವನಗರ ಪೋಲೀಸ್ ಠಾಣೆ ವ್ಯಾಪ್ತಿ	6-2-1995
23.	ನಾಗಪ್ಪ ರಸ್ತೆ, ವೈಯ್ಯಾಲಿಕಾವಲ್, ಬೆಂಗಳೂರು	2-2-1995
24.	ದೋಬಿಘಾಟ್, ವೈಯ್ಯಾಲಿಕಾವಲ್, ಬೆಂಗಳೂರು	22-2-1995
25.	ಕಬ್ಬನ್ ರಸ್ತೆ, ಬೆಂಗಳೂರು	18-1-1995
26.	ಕಮರ್ಷಿಯಲ್ ಸ್ಟ್ರೀಟ್ ಪೋಲೀಸ್ ಠಾಣೆ ವ್ಯಾಪ್ತಿ	27-1-1995
27.	ಬಸ್ ನಿಲ್ದಾಣ, ಕಮರ್ಷಿಯಲ್ ಸ್ಟ್ರೀಟ್ ಪೋಲೀಸ್‌ಠಾಣೆ ವ್ಯಾಪ್ತಿ	20-2-1995
28.	ವಿ.ಇ.ಟಿ.ಸ್ಕೂಲ್ ಹತ್ತಿರ, ಜೆ.ಪಿ. ನಗರ, 2ನೇ ಹಂತ ಬೆಂಗಳೂರು	12-1-1995
29.	17ನೇ ಮುಖ್ಯ ರಸ್ತೆ, ಜೆ.ಪಿ. ನಗರ, 2ನೇ ಹಂತ ಬೆಂಗಳೂರು	14-1-1995
30.	17ನೇ ಮುಖ್ಯ ರಸ್ತೆ, ಜೆ.ಪಿ. ನಗರ, ಬೆಂಗಳೂರು	14-1-1995
31.	18ನೇ ಮುಖ್ಯ ರಸ್ತೆ, ಜೆ.ಪಿ. ನಗರ, 2ನೇ ಹಂತ	7-3-1995
32.	4ನೇ ಮುಖ್ಯ ರಸ್ತೆ, ಎನ್.ಆರ್. ಕಾಲೋನಿ, ಬೆಂಗಳೂರು	18-2-1995
33.	ಗೋವಿಂದಪ್ಪ ರಸ್ತೆ, ರಾಯರ ಮಠದ ಬಳಿ, ಬಸವನಗುಡಿ, ಬೆಂಗಳೂರು.	27-2-1995
34.	ಕೆ.ಆರ್. ರಸ್ತೆ, ಬಸವನಗುಡಿ, ಬೆಂಗಳೂರು	9-3-1995
35.	ಗಣೇಶ್ ದೇವಸ್ಥಾನ, 27ನೇ ಕ್ರಾಸ್, ಜಯನಗರ, 7ನೇ ಬ್ಲಾಕ್	10-1-1995
36.	ಬನಶಂಕರಿ 2ನೇ ಹಂತ, ಬೆಂಗಳೂರು	24-1-1995
37.	10ನೇ ಕ್ರಾಸ್, 2ನೇ ಪಂತ, ಜೆ.ಪಿ.ನಗರ	12-1-1995
38.	ಆಡುಗೋಡಿ ಚೆಕ್‌ಪೋಸ್ಟ್	2-2-1995

39.	ಕೈಗೊಂಡನಹಳ್ಳಿ ಕೋರಮಂಗಲ ಪೋಲೀಸ್‌ಠಾಣೆ ವ್ಯಾಪ್ತಿ	15-2-1995
40	ಜಯನಗರ, 9ನೇ ಕ್ರಾಸ್	14-3-1995
41.	ಸೌಭಾಗ್ಯ ಅಪಾರ್ಟ್‌ಮೆಂಟ್ಸ್, ಜೆ.ಪಿ. ನಗರ, ಪೋಲೀಸ್ ಠಾಣೆ ವ್ಯಾಪ್ತಿ.	24-2-1995
42.	ಬಿ ಇ ಎಂ ಎಲ್ ಲೇಔಟ್, ಬಸವೇಶ್ವರನಗರ ಠಾಣೆ ವ್ಯಾಪ್ತಿ	9-2-1995
43.	115ನೇ ರಸ್ತೆ ಮುಂದೆ ಶಾರದ ಕಾಲೋನಿ, ಬಸವೇಶ್ವರ ನಗರ	20-2-1995
44.	12ನೇ ಮುಖ್ಯ ರಸ್ತೆ ಬಸವೇಶ್ವರ ನಗರ	15-3-1995.

ಅನುಬಂಧ -3 ಚುಕ್ಕೆ ಗುರುತಿನ ಪ್ರಶ್ನೆ ನಂ. 22 ಜನವರಿ 1, 1995ರಿಂದ ಮಾರ್ಚ್ 95ರ ವರೆಗೆ ನಡೆದಿರುವ ರೌಡಿಗಳ ಧಾಂದಲೆಗಳ ಬಗ್ಗೆ ವಿವರ

ಕ್ರಮ ಸಂಖ್ಯೆ	ಸ್ಥಳ	ದಿನಾಂಕ
1.	ಚಾರ್ಮುಡಿ ಹೋಟೆಲ್, ಕೊಟ್ಟಿಗೆಹಾರ್ ಚಿಕ್ಕಮಗಳೂರು, ಬಣಕಲ್ ಪೋಲೀಸ್‌ಠಾಣೆ ಅಪರಾಧ ಸಂಖ್ಯೆ 4:95, ಕಲಂ 143, 144, 427, 506 ಜೊತೆಗೆ 149 ಭಾರತ ದಂಡ ಸಂಹಿತೆ.	14-1-1995
2.	ಮೂಡಿಗೆರೆ ಪೋಲೀಸ್ ಠಾಣೆ ವ್ಯಾಪ್ತಿ ಅಪರಾಧ ಸಂಖ್ಯೆ 24:95, ಕಲಂ 143, 147,334, 353, 507 ಜೊತೆಗೆ 149 ಭಾ.ದಂ.ಸಂ.	7-2-1995
3.	ಮಡಿಕೇರಿ ಅರಣ್ಯ ಪ್ರದೇಶ ಮೂಡಿಗೆರೆ ಪೋಲೀಸ್ ಠಾಣೆ ಅಪರಾಧ ಸಂಖ್ಯೆ 33:95 ಕಲಂ 143, 147, 148, 332, 307, ಜೊತೆಗೆ 149 ಭಾ.ದಂ.ಸಂ.	4-3-1995
4.	ಅಡ್ಡೂರು ಕೈಕಂಬಾಪೊಳಲೆ ರಸ್ತೆ ಬಜಪೆ ಪೋಲೀಸ್ ಠಾಣೆ, ಅಪರಾಧ ಸಂಖ್ಯೆ 7:95, ಕಲಂ 143, 147, 148, 341, 302 ಐಪಿಸಿ.	29-1-1995
5.	ಹನುಮಂತನಗರ ಪೋಲೀಸ್ ಠಾಣೆ ವ್ಯಾಪ್ತಿ, ಕೋಹಿನೂರು ಮೈದಾನದ ಸಮೀಪ	17-2-1995
6.	ಕೆಂಗೇರಿ ಗೇಟ್ ಪೋಲೀಸ್ ಠಾಣಾ ವ್ಯಾಪ್ತಿ	20-2-1995
7.	ಎಂ.ಸಿ.ಲೇ ಔಟ್ ತಿಮ್ಮೇನಹಳ್ಳಿ, ಗೋವಿಂದರಾಜನಗರ ಮತ್ತು ಓಟಗೆರೆ ಎಂಬ ಒಟ್ಟಿಗಿರುವ ಬಡಾವಣೆ	23-2-1995.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಜನವರಿ 1 ರಿಂದ ಮಾರ್ಚ್ 30ರ ವರೆಗೆ ರಸ್ತೆ ದರೋಡೆ 13....., ರಸ್ತೆ ಲೂಟಿ ....., ಇಲ್ಲ ಇಲ್ಲಿ ರಸ್ತೆ ಲೂಟಿ ಎಂದು ಇದೆ.., ಅಲ್ಲಿ ದರೋಡೆ ಎಂದು ಇದೆ, ಇಲ್ಲಿ ಲೂಟಿ ಎಂದು ಇದೆ. ಇದು ನನ್ನ ಪ್ರಶ್ನೆ ಸ್ವಾಮಿ, ನಾನು ಕೇಳುವುದಕ್ಕೆ ಸ್ವಲ್ಪ ನಮ್ಮ ಸದಸ್ಯರು ಅವಕಾಶ ಕೊಟ್ಟುಬಿಟ್ಟರೆ ನಾನು ಕೇಳಿಕೊಳ್ಳುತ್ತೇನೆ. ಯಾರ ಸಹಕಾರವು ಬೇಕಾಗಿಲ್ಲ, ಇಲ್ಲಿ ರಸ್ತೆ ಲೂಟಿ ಎಂದು ಇದೆ, ಅಲ್ಲಿ ರಸ್ತೆ ದರೋಡೆ ಎಂದು ಅವರು ಹೇಳುತ್ತಾರೆ. ಇನ್ನೊಬ್ಬರು ಕನ್ನಡಕ ಬೇಕು ಎಂದು ಹೇಳುತ್ತಾರೆ. ಇದನ್ನು ನಾವು ಎಲ್ಲಿಂದ ತರೋಣ. ಈಗ ಕನ್ನಡಕವನ್ನು ಹಾಕಬೇಕಾದವರು ಅವರು. ನನಗೆ ಕನ್ನಡಕ ಬೇಕು ಕನ್ನಡಕ ಬೇಕು ಎಂದು ಹೇಳುತ್ತಾರೆ ಏನಾಗಿದೆ ....., ರಸ್ತೆ ಲೂಟಿ 44, ರೌಡಿಗಳ ದಾಂಧಲೆ 7....,

ಶ್ರೀ ಬಸವರಾಜ್ ರಾಯರೆಡ್ಡಿ : ನೀವು ರಸ್ತೆ ಲೂಟಿ ಎಂದು ಹೇಳುತ್ತಿದ್ದೀರಿ, ರಸ್ತೆ ಲೂಟಿ ಆಗಲಿಕ್ಕೆ ಸಾಧ್ಯವೆ? ರಸ್ತೆಗಳಲ್ಲಿ ಲೂಟಿ ಎಂದು ಹೇಳಿ.

ಶ್ರೀ ವಾಟಾಳ್ ನಾಗರಾಜ್ : ನೀವು ಕೊಟ್ಟಿರುವ ಉತ್ತರದಲ್ಲಿ ಹಾಗಿದೆ. ಈಗ ! ಅವರು ಆ ರೀತಿ ಅಚ್ಚುಮಾಡಿಸಿ ಪ್ರಶ್ನೆಗಳಿಗೆ ಉತ್ತರವನ್ನು ಆ ರೀತಿ ಕೊಟ್ಟು..., ಈಗ ನಾನು ಅವರ ಮೇಲೆ ಎದ್ದುಬಿದ್ದರೆ ಬಹಳ ನೋವು ಪಟ್ಟುಕೊಳ್ಳುತ್ತಾರೆ. ಇದು ಸರಿಯಲ್ಲ ಎಂದು ನಾನು ಸುಮ್ಮನಿದ್ದೇನೆ. ಮಾನ್ಯ ಅಧ್ಯಕ್ಷರೆ ಈ ಪರಿಸ್ಥಿತಿ ರಾಜ್ಯದಲ್ಲಿ ಈ ರೀತಿ ಲೂಟಿ, ದರೋಡೆ ನಡೆಯುತ್ತಿದ್ದರೆ ಇದನ್ನು ನಿಲ್ಲಿಸುರುದಕ್ಕೆ ಸರ್ಕಾರದವರು ಪರಿಣಾಮಕಾರಿಯಾದಂಥ ಕ್ರಮ ಏನು ಕೈಗೊಂಡಿದ್ದೀರಿ? ಮತ್ತು ನಿಮ್ಮಲ್ಲಿ ಇರತಕ್ಕಂಥ ಸಿಬ್ಬಂದಿಯ ವ್ಯವಸ್ಥೆ ಏನು? ಮತ್ತು ಈಗಾಗಲೇ ಬಾಂಬೆ ನಗರದಿಂದ ಬೆಂಗಳೂರು ನಗರದಲ್ಲಿ ಭೂಗತ ದೊರೆಗಳು ಇಲ್ಲಿ ಇಳಿದಿದ್ದಾರೆ. ಮತ್ತು ಭೂಗತ ವ್ಯವಸ್ಥೆ ಇಲ್ಲಿ ನಡೆಯುತ್ತಿದೆ ಎನ್ನತಕ್ಕಂಥದ್ದು ನಿನ್ನೆಯ ಪ್ರಜಾವಾಣಿ ಪತ್ರಿಕೆಯಲ್ಲಿ ಸುಂದರವಾದಂಥ ದೊಡ್ಡ ಹೇಳಿಕೆಯ ಪ್ರಕಟಣೆ ಬಂದಿದೆ ಮತ್ತು ಇದಲ್ಲದೆ ಅನೇಕ ಕಡೆ ಜನ ಹೇಳುತ್ತಿದ್ದಾರೆ. ಬೆಂಗಳೂರು ನಗರ ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದೆ. ರಾಜ್ಯದ ಅನೇಕ ಕೇಂದ್ರಗಳು, ನಗರಪ್ರದೇಶಗಳು ಬೆಳೆಯುತ್ತಿವೆ. ಇಲ್ಲಿ ಇಂತಹ ಒಂದು ಜನ ಬಂದು ಸೇರತಕ್ಕಂಥ ವ್ಯವಸ್ಥೆ ಇರುವುದರಿಂದ, ಇದನ್ನು ತಡೆಯುವುದಕ್ಕೆ ಸರ್ಕಾರದಲ್ಲಿ ಸಾಮರ್ಥ್ಯ ಇದೆಯೇ ಇಲ್ಲವೆ? ಬೆಂಗಳೂರು ನಗರದಲ್ಲಿ ಈ ರೀತಿ ಪ್ರಮಾಣದಲ್ಲಿ ನಡೆದಿರತಕ್ಕಂಥ ಈ ರೌಡಿಗಲಾಟಿ ಮತ್ತು ರಸ್ತೆಗಳ ದರೋಡೆ ಇದನ್ನೆಲ್ಲಾ ನಿಲ್ಲಿಸತಕ್ಕ ಏನಾದರೂ ವ್ಯವಸ್ಥೆ ನಿಮ್ಮಲ್ಲಿ ಇದೆಯೆ? ನೀವು ಸುಮ್ಮನೆ ಬರೀ ಹೇಳಿಕೆ ಕೊಡುವುದರಲ್ಲೇ ನಿರತರಾಗಿದ್ದೀರ ಎಂಬತಕ್ಕಂಥ ಮಾತನ್ನು ತಮಗೆ ಹೇಳುತ್ತಿದ್ದೇನೆ. ಮತ್ತು ಈ ಬಗ್ಗೆ ನೀವು ಹೊಸದಾಗಿ ಪೋಲೀಸ್ ಇಲಾಖೆಯನ್ನು ಸಂಪೂರ್ಣವಾಗಿ, ಸಮಗ್ರವಾಗಿ ಬದಲಾವಣೆ ಮಾಡತಕ್ಕಂಥ ಚಿಂತನೆ ಏನಾದರೂ ಇದೆಯೆ? ಬದಲಾವಣೆ ಮಾಡಿದಮೇಲೆ ಇದನ್ನು ನಿಲ್ಲಿಸುತ್ತೀರಾ? ಅಲ್ಲಿಯವರೆಗೆ ನಿಲ್ಲಿಸುವುದಿಲ್ಲ ಎನ್ನತಕ್ಕಂಥ ಧೋರಣೆ ಏನಾದರೂ ಇದೆಯೆ? ಅದನ್ನು ತಾವು ದಯವಿಟ್ಟು ತಿಳಿಸಬೇಕು?

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಅಧ್ಯಕ್ಷರೆ, ಈ ರಸ್ತೆ ದರೋಡೆಗಳ ಬಗ್ಗೆ ಪರಿಣಾಮಕಾರಿಯಾಗಿ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನತಕ್ಕಂಥ ಪ್ರಶ್ನೆಗೆ, ಈ ರಸ್ತೆ ದರೋಡೆಗಳನ್ನು ನಿಲ್ಲಿಸಲಿಕ್ಕೆ ನಾವು ಡಿಐಜಿಗಳ ಹಂತದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಒಂದು ಸ್ಟಾಡನ್ನು ಮಾಡಿ ಎಲ್ಲಾ ಕಡೆಗಳಲ್ಲೂ, ಕೆಲವು ಸೂಕ್ಷ್ಮ ಪ್ರದೇಶಗಳನ್ನು ಐಡೆಂಟಿಫೈ ಮಾಡಿ ದರೋಡೆಗಳು ಫ್ರಿಕ್ವೆಂಟ್ ಆಗಿ ನಡೆಯುತ್ತಿರುವುದರಿಂದಾಗಿ ಅವುಗಳನ್ನು ತಡೆಗಟ್ಟಲಿಕ್ಕೆ ಎಲ್ಲಾ ಕ್ರಮಗಳು ಮತ್ತು ಪೋಲೀಸ್ ಅಧಿಕಾರಿಗಳಿಗೆ ಬೇಕಾಗಿರತಕ್ಕಂಥ ವಾಹನಗಳು ಮತ್ತು ಶಸ್ತ್ರಾಗಳನ್ನು

ಕೊಡಲಿಕ್ಕೆ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ಲಕ್ಸುರಿ ಬಸ್ಸುಗಳು, ಸೆಮಿ ಲಕ್ಸುರಿ ಬಸ್ಸುಗಳು, ಲಾಂಗ್ ಡಿಸ್ಟನ್ಸ್ ಬಸ್ಸುಗಳಲ್ಲಿ ಪೋಲೀಸರನ್ನು, ಗಾರ್ಡ್‌ಗಳನ್ನು ಹಾಕಿ, ಶಸ್ತ್ರ ಪಡೆಗಳನ್ನು ಹಾಕಿ ಕಳುಹಿಸಲಿಕ್ಕೆ ಸಹಿತ ನಾವು ವ್ಯವಸ್ಥೆಯನ್ನು ಈಗಾಗಲೇ ಮಾಡಿದ್ದೇವೆ. ನಾವು ಪರಿಣಾಮಕಾರಿಯಾದ ಕ್ರಮವನ್ನು ತೆಗೆದುಕೊಂಡಿದ್ದೇವೆ ಎಂದು ನನಗನ್ನಿಸುತ್ತದೆ, ಆದರೆ ಇದು ನಡೆದಿರತಕ್ಕಂಥದ್ದು ನಿಜ ಇದು ಹೊಸದಾಗಿ ನಡೆದಿರತಕ್ಕಂಥದಲ್ಲ ಹಿಂದೆ ಇದು ನಡೆದಿದೆ ಎನ್ನತಕ್ಕಂಥ ಡಿಫೆನಸ್ಸು ನಾನು ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ, ನಡೆದಿರತಕ್ಕಂಥದ್ದು ನಿಜ. ಇದನ್ನು ತಡೆಗಟ್ಟಬೇಕು. ನಾನು ಈ ದೃಷ್ಟಿಯಲ್ಲಿ ಎಲ್ಲರ ಸಹಕಾರವನ್ನು ಕೋರುತ್ತೇನೆ. ನಿರ್ಧಾಕ್ಷಿಣ್ಯವಾಗಿ ಪೊಲೀಸರಿಗೆ ಕಂಡಲ್ಲಿ ಗುಂಡನ್ನು ಹಾರಿಸಬೇಕು ಎಂದು ಹೇಳಿ, ಎಲ್ಲಿ ದರೋಡೆ ಮಾಡುತ್ತಿದ್ದಾರೆ ಅಂತಹ ದರೋಡೆಕೋರರ ಮೇಲೆ, ಎಲ್ಲಿ ಕಾಣುತ್ತಾರೆ ಅಲ್ಲಿ ಕಂಡಲ್ಲಿ ಗುಂಡು ಹಾರಿಸತಕ್ಕಂಥ ಆಜ್ಞೆಯನ್ನು ಮುಖ್ಯಮಂತ್ರಿಗಳು ಈಗಾಗಲೇ ಮಾಡಿದ್ದಾರೆ. ಮತ್ತು ಎರಡನೆಯದಾಗಿ, ಬೊಂಬಾಯಿಯಿಂದ ಭೂಗತ ದೊರೆಗಳು ಬೆಂಗಳೂರಿಗೆ ಬಂದಿದ್ದಾರೆ ಎನ್ನತಕ್ಕಂಥ ಪ್ರಶ್ನೆಯನ್ನು ಕೇಲಿದ್ದೀರಿ, ಈ ಬಗ್ಗೆ ಸರ್ಕಾರಕ್ಕೆ ಯಾವುದೇ ತರಹದ ಈ ರೀತಿಯ ಮಾಹಿತಿ ಇದುವರೆಗೆ ಬಂದಿಲ್ಲ. ಅಲ್ಲಿ ಇಲ್ಲಿ ಮಾತನಾಡತಕ್ಕದ್ದನ್ನು ನಾನೂ ಸಹಿತ ಕೇಳಿದ್ದೇನೆ. ಅಧಿಕಾರಿಗಳ ಜೊತೆಯಲ್ಲಿ ಈಗಾಗಲೇ ನಾನು ವಿಷಯವನ್ನು ಚರ್ಚೆ ಮಾಡಿದ್ದೇನೆ. ಮತ್ತೆ ನಿರ್ಧಾಕ್ಷಿಣ್ಯವಾಗಿ ಯಾವುದೇ ರೀತಿಯ ಅಂಡರ್ವರ್ಲ್ಡ್ ಆಕ್ಟಿವಿಟೀಸ್ಗೆ ಅವಕಾಶವನ್ನು ಕೊಡುವುದಿಲ್ಲ ಎನ್ನುವುದನ್ನೂ ಸಹಿತ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ರೌಡಿಗಳ ದಾಂಧಲೆ ಸಂಬಂಧದಲ್ಲಿ ಸಮಗ್ರ ಬದಲಾವಣೆಯನ್ನು ಪೊಲೀಸರಲ್ಲಿ ಏನಾದರೂ ಮಾಡಿದ್ದೀರಾ ಎಂದು ಕೇಳಿದ್ದಾರೆ. ನನಗೆ ಅನ್ನಿಸುತ್ತದೆ, ಮಾನ್ಯ ಅಧ್ಯಕ್ಷರೆ ನಾನು ಅಲ್ಲಿ ಕುಳಿತುಕೊಂಡಿದ್ದಾಗಲೂ ಈ ಮಾತನ್ನು ಹೇಳಿದ್ದೇನೆ, ಇಲ್ಲೂ ಅದೇ ಮಾತನ್ನು ಹೇಳಿದ್ದೇನೆ. ನಮ್ಮ ಪೊಲೀಸರಿಗೆ ರೌಡಿಗಳ ದಾಂಧಲೆಯನ್ನು ತಡೆಗಟ್ಟಲಿಕ್ಕೆ ಬೇಕಾದಷ್ಟು ಶಕ್ತಿ ಇದೆ. ಸಮಗ್ರವಾಗಿ ಬದಲಾವಣೆ ಮಾಡತಕ್ಕಂಥ ವಿಚಾರವನ್ನು ಇವತ್ತು ನಾನು ಯಾವುದು ಸಹಿತ ನಮ್ಮ ಸರ್ಕಾರ ಇಟ್ಟುಕೊಂಡಿಲ್ಲ, ಅವಶ್ಯಕತೆ ಬಂದಲ್ಲಿ ಕಾನೂನನ್ನು ಪರಿಪಾಲನೆ ಮಾಡುವ ದೃಷ್ಟಿಯಿಂದುಗಿ ಯಾರು ಕಾನೂನನ್ನು ಕೈಗೆ ತೆಗೆದುಕೊಳ್ಳುತ್ತಾರೆ ಅಂತಹ ಸಂದರ್ಭದಲ್ಲಿ ನಿರ್ಧಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಲಿಕ್ಕೆ ಪೊಲೀಸರಿಗೆ ನಾವು ಹೇಳಿದ್ದೇವೆ. ಎಲ್ಲಿ ಅವಶ್ಯಕತೆ ಬೀಳುತ್ತದೆ ಅಲ್ಲಿ ಮತ್ತಷ್ಟು ಸಹಕಾರವನ್ನು ಪೊಲೀಸರಿಗೆ ಸರ್ಕಾರ ಕೊಡುತ್ತದೆ ಎನ್ನುವ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ. ಮಾನ್ಯ ಸದಸ್ಯರಾಗಲೀ ಇತರೆ ಸದಸ್ಯರಾಗಲೀ ರಾಜ್ಯದ ಜನತೆಯಾಗಲೀ ತಮ್ಮ ಮೂಲಕವಾಗಿ ಈ ದಾಂಧಲೆಗಳನ್ನು ಸಂಪೂರ್ಣವಾಗಿ ತಡೆಗಟ್ಟಲಿಕ್ಕೆ ಯಾವುದೇ ಹಸ್ತಕ್ಷೇಪ ಇಲ್ಲದೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಭರವಸೆಯನ್ನು ಕೊಡುತ್ತೇವೆ.

ಶ್ರೀ ಮಾಟಾಳ್ ನಾಗರಾಜ್ : ಬೆಂಗಳೂರು ನಗರದಲ್ಲಿ ನಡೆದಿರತಕ್ಕ ಲೂಟಿಗಳು ಎಷ್ಟು? ನಡೆದಿರತಕ್ಕಂಥ ಕೊಲೆಗಳು ಎಷ್ಟು ಈ ಕೊಲೆಗಳ ಬಗ್ಗೆ ಏನೇನು ಮಾಹಿತಿ ಇದೆ ಅದನ್ನು ತಾವು ದಯವಿಟ್ಟು ಸ್ವಲ್ಪ ಹೇಲಿ ಸ್ವಾಮಿ.

ಅಧ್ಯಕ್ಷರು : ಮಾಹಿತಿಯನ್ನು ರಾಜ್ಯಪಾಲರ ಭಾಷಣದ ಮೇಲೆ ಅವಕಾಶ ಸಿಗುತ್ತದಲ್ಲ ಕೊಡುತ್ತಾರೆ ಬಿಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ತಮ್ಮ ಒಪ್ಪಿಗೆ ಮೇರೆಗೆ ಸರ್ಕಾರದವರು 225ಕ್ಕೂ ಹೆಚ್ಚು ರೌಡಿಗಳನ್ನು ಮೊದಲನೆ ಸಾರಿಗೆ ಬೆಂಗಳೂರಿನಲ್ಲಿ ಹಿಡಿದು ಜೈಲಿನಲ್ಲಿ ಹಾಕಿದ್ದೇವೆ ಇನ್ನೂ ಆ ರೀತಿ ಸಂಶಯ ಇರತಕ್ಕಂಥ ವ್ಯಕ್ತಿಗಳು ಕೆಲವರು ತಪ್ಪಸಿಕೊಂಡಿದ್ದಾರೆ. ಅವರನ್ನೂ ಒಳಗಡೆ ಹಾಕಬೇಕು ಎನ್ನತಕ್ಕಂಥದ್ದಕ್ಕೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ಕೊಲೆಗಳ ಅಂಕಿಸಂಖ್ಯೆಗಳನ್ನು, ಇತರೆ ಅಂಕಿಸಂಖ್ಯೆಗಳನ್ನು

ತಿಂಗಳವಾರು, ವಾರಗಟ್ಟಳಿ, ಯಾವ ದಿನ ನಡೆದಿದೆ ಎಂಬುದನ್ನು ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ ತಮ್ಮ ಆದೇಶದ ಮೇರೆಗೆ ಈ ಸಭೆಗೆ ಮಂಡಿಸುತ್ತೇನೆ.

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳಿಗೆ ಸೇರಿದ ಪ್ರತಿಭಾನ್ವಿತ ಸ್ನಾತಕೋತ್ತರ ಪದವೀಧರರ ನೇರ ನೇಮಕಾತಿ.

217 - ಶ್ರೀ ಎಂ.ಹೆಚ್. ಜಯಪ್ರಕಾಶ್ ನಾರಾಯಣ (ಯಲಹಂಕ) : ಮಾನ್ಯ ಮುಖ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹಿಂದಿನ ರಾಜ್ಯ ಸರ್ಕಾರದವರು ಸ್ನಾತಕೋತ್ತರ ಪದವಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿ ಉತ್ತೀರ್ಣರಾದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳನ್ನು ನೇರ ನೇಮಕ ಮಾಡುವ ಆದೇಶ ಮಾಡಿರುವುದನ್ನು ಜಾರಿಗೆ ತರಲಾಗಿದೆಯೇ?*

ಆ) *ಹಾಗಿದ್ದಲ್ಲಿ, ಯಾವ ಯಾವ ಇಲಾಖೆಗಳಲ್ಲಿ ಎಷ್ಟೆಷ್ಟು ಅಭ್ಯರ್ಥಿಗಳನ್ನು ಸರ್ಕಾರ ನೇಮಕ ಮಾಡಿದೆ?*

ಇ) *ಈ ಆದೇಶವನ್ನು ಜಾರಿಗೆ ತಂದ ದಿನಾಂಕದಿಂದ ನೇಮಕಗೊಂಡಿರುವ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಪಟ್ಟಿಯನ್ನು ಒದಗಿಸುವುದು?*

ಈ) *ಈ ಆದೇಶವು ಈಗ ಜಾರಿಯಲ್ಲಿದೆಯೇ ಜಾರಿಯಲ್ಲಿದ್ದರೆ ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ) ಹೌದು

ಆ) ಇ) ಪಟ್ಟಿ ಲಗತ್ತಿಸಿದೆ.

ಈ) ಹೌದು.

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಕೊರತೆ ಪ್ರಮಾಣವನ್ನು ಅನುಸರಿಸಿ 1984-85 ರಿಂದೀಚಿನ ಶೈಕ್ಷಣಿಕ ವರ್ಷಗಳಿಗೆ ಸಂಬಂಧಿಸಿದಂತೆ ನೇಮಕಾತಿಯನ್ನು ಮಾಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಕರ್ನಾಟಕ ಸಿವಿಲ್ ಸೇರೆ (ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಪ್ರತಿಭಾವಂತರನ್ನು ಕೆಲವೊಂದು ಗುಂಪು 'ಎ' ಮತ್ತು ಗುಂಪು 'ಬ' ಹುದ್ದೆಗಳಿಗೆ ನೇರ ನೇಮಕಾತಿ) ನಿಯಮಗಳು, 1985 ರಡಿ 1982-83ನೇ ಸಾಲಿನ ಆಯ್ಕೆ ಪಟ್ಟಿ

ಕ್ರ. ಸಂ.	ಹೆಸರು ಮತ್ತು ವಿಳಾಸ	ಹುದ್ದೆ	ನೇಮಕಗೊಂಡ ದಿನಾಂಕ
	(ದರ್ಜೆ -1 (ವೃಂದ - 'ಬಿ')		
1.	ಸುಭದ್ರ ಎಂ.ಎಸ್. ನಂ. 120 ಸಾಲ್ಮನೇ ಮುಖ್ಯರಸ್ತೆ ಜಯನಗರ, ಮೈಸೂರು.	ರಾಜ್ಯ ಲೆಕ್ಕ ಪತ್ರ ಇಲಾಖೆಯ ಸಹಾಯಕ ನಿಯಂತ್ರಕರು	7.5.1993
2.	ಗುಮ್ಮಡಿ ವೆಂಕಟೇಶ್ ಕುಮಾರ್ ಟಿ-1 ವಸತಿ ಗೃಹ, ಪಾವಟೆ ನಗರ, ಧಾರವಾಡ	-ಅದೇ-	